ಕರ್ನಾಟಕ ಸರ್ಕಾರ

**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ:ವಾತೆಸಆ (ಜಾರಿ)/ತುಮ/ಜಿ.ಸಿಇ-16/2020-21

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ,
(ಜಾರಿ) ವಾಣಿಜ್ಯ ತೆರಿಗೆ ಸಂಕೀರ್ಣ, 80-ಅಡಿ ರಸ್ತೆ,
ಸಿದ್ದರಾಮೇಶ್ವರ ಬಡಾವಣೆ, ತುಮಕೂರು-572103
ದಿನಾಂಕ 18-03-2021 ದೂ::0816-2291489

ಇವರಿಗೆ:
ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ವಾಣಿಜ್ಯ ತೆರಿಗೆ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು.

ಮಾನ್ಯರೇ, **(ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) ಬೆಂಗಳೂರು ರವರ ಮುಖಾಂತರ)**

ವಿಷಯ: ಸರಕು ಮತ್ತು ಸೇವಾ ತೆರಿಗೆ ಕಾಯ್ದೆ,2017 ರ ಕಲಂ-130ರ ಅಡಿಯಲ್ಲಿ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿರುವ 25120 ಕೆ.ಜಿ. ಅಡಿಕೆ ಸರಕನ್ನು ಮತ್ತು ಸರಕು ಸಾಗಾಣಿಕೆ ವಾಹನವನ್ನು ಹರಾಜು ಮೂಲಕ ವಿಲೇವಾರಿ ಮಾಡುವ ಸಂಬಂಧ ಸಾರ್ವಜನಿಕ ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ನೀಡಲಾಗಿದ್ದು ಸದರಿ ಮಾಹಿತಿಯನ್ನು ಇಲಾಖೆಯ ಅಂತರ್ಜಾಲಯಲ್ಲಿ ಪ್ರಕಟಿಸಲು ಕೋರುವ ಬಗ್ಗೆ -

ಉಲ್ಲೇಖ: 1) ಸರಕು ವಾಹನ ಸಂಖ್ಯೆ: UP-15-DT-8533 ರಲ್ಲಿ ಇರುವ ಸರಕನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡು ಹೊರಡಿಸಿರುವ ಆದೇಶ ಸಂಖ್ಯೆ:ACCT/Enf/TMK/GCE-67-A/2020-21 dated 26-02-2021.

2) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಕೋರಮಂಗಲ, ಬೆಂಗಳೂರು ಇವರ ಪತ್ರ ಸಂಖ್ಯೆ:ವಾತೆಜಂಆ/ಜಾ/ಬೆಂ/ಪಿಎ/ಸಿಆರ್-19 2020-21 ಟಿ-1592/2020-21 ದಿನಾಂಕ 16-03-2021.

<><><>

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಕಲಂ-130ರ ಅಡಿಯಲ್ಲಿ 25120 ಕೆ.ಜಿ. ಅಡಿಕೆಯನ್ನು ಮತ್ತು ಸರಕು ವಾಹನ ಸಾಗಾಣಿಕೆ ಮಾಡುತ್ತಿದ್ದ ವಾಹನ ಸಂಖ್ಯೆ: UP-15-DT-8533 ನ್ನು ಈ ಕಛೇರಿಯ ಆದೇಶ ದಿನಾಂಕ 26-02-2021 ರನ್ವಯ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಸರಕು ಮತ್ತು ವಾಹನವನ್ನು ಸಾರ್ವಜನಿಕ ಬಿಡ್ ಮೂಲಕ ಹರಾಜು ಮಾಡಲು ದಿನಾಂಕ 16-03-2021 ರಂದು ನೋಟೀಸ್ ಹೊರಡಿಸಲಾಗಿದ್ದು, ಈ ಸಂಬಂಧ ಸಾರ್ವಜನಿಕ ಹರಾಜು ಪ್ರಕಟಣೆಯು ದಿನಾಂಕ 17-03-2021ರ ದೈನಂದಿನ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಆದುದರಿಂದ, ಸದರಿ "ಹರಾಜು ಪ್ರಕಟಣೆ" ಯನ್ನು ಇಲಾಖೆಯ ಅಂತರ್ಜಾಲ http://ctax.kar.nic.in/publicauction.asp ರಲ್ಲಿ ಪ್ರಕಟಿಸುವಂತೆ ತಮ್ಮನ್ನು ಕೋರುತ್ತೇನೆ.

ತಮ್ಮ ವಿಶ್ವಾಸಿ,
18.03.21
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ) ತುಮಕೂರು
Assistant Commissioner of Comml.Taxes,
(Enforcement) Tumkur.

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಸಂಕೀರ್ಣ, 80–ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ,
ತುಮಕೂರು–572103 ಕಛೇರಿ ದೂರವಾಣಿ: 0816–2291489 E-mail: acctenf.tum@ka.gov.in

ಸಂಖ್ಯೆ:ವಾತೆಸಆ/ಜಾರಿ/ತು/ಜಿಸಿಆರ್–67–ಎ/2020–21 ದಿನಾಂಕ 17–03–2021.

=====================================================================

## :: ಅಡಿಕೆ ಹರಾಜು ಪ್ರಕಟಣೆ ::

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ದಿನಾಂಕ 08–09–2020 ರಂದು 25120 ಕೆ.ಜಿ. ಅಡಿಕೆಯನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ,2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ 24–03–2021 ರಂದು ಬೆಳಿಗ್ಗೆ 11.00 ಗಂಟೆಗೆ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿಯುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

### –:: ಷರತ್ತುಗಳು ::–

(1) ಮುಟ್ಟುಗೋಲು ಹಾಕಿಕೊಂಡಿರುವ ಅಡಿಕೆಯನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರ ಕಛೇರಿಯ ಆವರಣದಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು ದಿನಾಂಕ 20–03–2021 ರಂದು 12.00 ಗಂಟೆಯಿಂದ 3.00 ಗಂಟೆಯವರೆಗೆ / ಕಛೇರಿಯ ವೇಳೆಯಲ್ಲಿ ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ.

(2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಖರೀದಿದಾರರು ರೂ.2,00,000–00 (ರೂಪಾಯಿ ಎರಡು ಲಕ್ಷ ಮಾತ್ರ) ಮೌಲ್ಯದ ಮೊತ್ತವನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು / Assistant Commissioner of Commercial Taxes (Enforcement) Tumakuru ಇವರ ಹೆಸರಿನಲ್ಲಿ ಡಿ.ಡಿ.ಯನ್ನು ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

(3) ಸಂವಹನಕ್ಕಾಗಿ ಬಿಡ್‌ದಾರರು ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ನಂಬರ್, ಇ–ಮೇಲ್ ವಿಳಾಸ ಗಳನ್ನು ಒದಗಿಸುವುದು.

(4) ತದನಂತರ ಆಸಕ್ತಿಯುಳ್ಳ ಖರೀದಿದಾರರು (ಕಡ್ಡಾಯವಾಗಿ ಜಿ.ಎಸ್.ಟಿ. ಕಾಯ್ದೆ ಅಡಿ ನೋಂದಾಯಿತರಾಗಿರತಕ್ಕದ್ದು) ಸೀಲು ಮಾಡಿದ ಬಿಡ್ ಲಕೋಟೆ ಜೊತೆಗೆ ಡಿ.ಡಿ.ಯನ್ನು ನೋಂದಣಿ ಅಂಚೆ ಅಥವಾ ವೈಯಕ್ತಿಕವಾಗಿ ದಿನಾಂಕ 23–03–2021 ರ ಸಾಯಂಕಾಲ 5.00 ಗಂಟೆಯ ಒಳಗಾಗಿ ಕಛೇರಿಗೆ ತಲುಪುವಂತೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

–2–

(5) ಬಿಡ್ ಮೊತ್ತವನ್ನು ಪ್ರತಿ ಕೆ.ಜಿ.ಗೆ ರೂಪಾಯಿ ಲೆಕ್ಕದಲ್ಲಿ ನೀಡುವುದು.

(6) ಕಾರಣಾಂತರಗಳಿಂದ ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ಹೊಂದಿರುತ್ತಾರೆ.

(7) ಪ್ರತಿ ಬಿಡ್‌ದಾರರು ನಮೂದಿಸಿದ ಬಿಡ್ ಮೊತ್ತವನ್ನು ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುವುದು, ಬಿಡ್‌ದಾರರು ಬಿಡ್ ಮಾಡಿದ ಮೊತ್ತವು ಸಮಂಜಸವಾಗಿದ್ದಲ್ಲಿ ಅತಿಹೆಚ್ಚು ಮೊತ್ತ ಬಿಡ್ ಮಾಡಿದ ಬಿಡ್‌ದಾರರಿಗೆ ಸರಕನ್ನು ಪಡೆದುಕೊಳ್ಳುವಂತೆ ತಿಳಿಸಲಾಗುವುದು.

(8) ಯಶಸ್ವಿಯಾದ ಬಿಡ್‌ದಾರರು ಬಿಡ್ ಹಣವನ್ನು ಏಳು ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿ.ಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅನೋಂದಾಯಿತ ಖರೀದಿಯೆಂದು ಪರಿಗಣಿಸತಕ್ಕದ್ದು.

(9) ನಿಗಧಿತ 07 ದಿನಗಳೊಳಗಾಗಿ ಪೂರ್ತಿ ಬಿಡ್ ಹಣವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಹಾಗೂ ಸದರಿ ಬಿಡ್‌ನ್ನು ಯಶಸ್ವಿ ಬಿಡ್‌ದಾರರ ನಂತರ ಯಾರು ಹೆಚ್ಚಿನ ಬಿಡ್ ಮಾಡಿರುತ್ತಾರೆಯೋ ಅವರಿಗೆ ನೀಡಲಾಗುವುದು ಅಥವಾ ಅವರು ನಮೂದಿಸಿರುವ ಬಿಡ್ ಮೊತ್ತವು ಸಮಂಜಸವಾಗಿಲ್ಲದ ಪಕ್ಷದಲ್ಲಿ ಹೊಸ ಹರಾಜು ಪ್ರಕ್ರಿಯೆಯನ್ನು ನಡೆಸಲಾಗುವುದು.

(10) ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು.

(11) ಯಶಸ್ವಿಯಾದ ಬಿಡ್‌ದಾರರು ಸದರಿ ಸರಕಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ ಅಡಿಯಲ್ಲಿ ಅನ್ವಯಿಸುವ ಸೆಸ್, ಹಾಗೂ ಇತರೆ ಭಾದ್ಯತೆಗೆ ಒಳಪಡಬೇಕಾಗಿರುತ್ತದೆ.

(12) ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction .asp ರಲ್ಲಿ ಪ್ರಕಟಿಸಲಾಗಿದೆ.

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ) ತುಮಕೂರು.

Assistant Commissioner of Comml. Taxes,
(Enforcement) Tumkur.

**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆಗಳ ಇಲಾಖೆ**

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಸಂಕೀರ್ಣ, 80–ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ತುಮಕೂರು–572103 ಕಛೇರಿ ದೂರವಾಣಿ: 0816–2291489 E-mail: acctenf.tum@ka.gov.in:

ಸಂಖ್ಯೆ:ವಾತೆಸಆ/ಜಾರಿ/ತು/ಜಿಸಿಆರ್–67–ಎ/2020–21 ದಿನಾಂಕ 17–03–2021.

===

**:: ಸರಕು ವಾಹನ ಹರಾಜು ಪ್ರಕಟಣೆ ::**

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ದಿನಾಂಕ 08–09–2020 ರಂದು ಸರಕು ವಾಹನ ಸಂಖ್ಯೆ: UP-15-DT-8533 ನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ,2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ "ಸರಕು ವಾಹನ" ವನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ 24–03–2021 ರಂದು ಮಧ್ಯಾಹ್ನ 03.00 ಗಂಟೆಗೆ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿಯುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

**–:: ಷರತ್ತುಗಳು ::–**

(1) ಮುಟ್ಟುಗೋಲು ಹಾಕಿಕೊಂಡಿರುವ ಸರಕು ವಾಹನವನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರ ಕಛೇರಿಯ ಆವರಣದಲ್ಲಿ ನಿಲುಗಡೆ ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು ದಿನಾಂಕ 20–03–2021 ರಂದು ಕಛೇರಿಯ ವೇಳೆಯಲ್ಲಿ ಸದರಿ ವಾಹನವನ್ನು ಪರಿಶೀಲಿಸಬಹುದಾಗಿದೆ. (Tata Company, Truck, Open Body, Heavy Goods Vehicle, Date of Registration 04-07-2014)

(2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಖರೀದಿದಾರರು ರೂ.10,000–00 (ರೂಪಾಯಿ ಹತ್ತು ಸಾವಿರ ಮಾತ್ರ) ಮೌಲ್ಯದ ಮೊತ್ತವನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು / Assistant Commissioner of Commercial Taxes (Enforcement) Tumakuru ಇವರ ಹೆಸರಿನಲ್ಲಿ ಡಿ.ಡಿ.ಯನ್ನು ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

(3) ಸಂವಹನಕ್ಕಾಗಿ ಬಿಡ್‌ದಾರರು ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ನಂಬರ್, ಇ–ಮೇಲ್ ವಿಳಾಸ ಗಳನ್ನು ಒದಗಿಸುವುದು.

(4) ತದನಂತರ ಆಸಕ್ತಿಯುಳ್ಳ ಖರೀದಿದಾರರು ಸೀಲು ಮಾಡಿದ ಬಿಡ್ ಲಕೋಟೆ ಜೊತೆಗೆ ಡಿ.ಡಿ.ಯನ್ನು ನೋಂದಣಿ ಅಂಚೆ ಅಥವಾ ವೈಯಕ್ತಿಕವಾಗಿ ದಿನಾಂಕ 23-03-2021 ರ ಸಾಯಂಕಾಲ 5.00 ಗಂಟೆಯ ಒಳಗಾಗಿ ಕಛೇರಿಗೆ ತಲುಪುವಂತೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

(5) ಕಾರಣಾಂತರಗಳಿಂದ ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ಹೊಂದಿರುತ್ತಾರೆ.

(6) ಪ್ರತಿ ಬಿಡ್‌ದಾರರು ನಮೂದಿಸಿದ ಬಿಡ್ ಮೊತ್ತವನ್ನು ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುವುದು, ಬಿಡ್‌ದಾರರು ಬಿಡ್ ಮಾಡಿದ ಮೊತ್ತವು ಸಮಂಜಸವಾಗಿದ್ದಲ್ಲಿ ಅತಿಹೆಚ್ಚು ಮೊತ್ತ ಬಿಡ್ ಮಾಡಿದ ಬಿಡ್‌ದಾರರಿಗೆ ಸರಕನ್ನು ಪಡೆದುಕೊಳ್ಳುವಂತೆ ತಿಳಿಸಲಾಗುವುದು.

(7) ಯಶಸ್ವಿಯಾದ ಬಿಡ್‌ದಾರರು ಬಿಡ್ ಹಣವನ್ನು ಏಳು ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿ.ಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು.

(8) ನಿಗಧಿತ 07 ದಿನಗಳೊಳಗಾಗಿ ಪೂರ್ತಿ ಬಿಡ್ ಹಣವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಹಾಗೂ ಸದರಿ ಬಿಡ್‌ನ್ನು ಯಶಸ್ವಿ ಬಿಡ್‌ದಾರರ ನಂತರ ಯಾರು ಹೆಚ್ಚಿನ ಬಿಡ್ ಮಾಡಿರುತ್ತಾರೆಯೋ ಅವರಿಗೆ ನೀಡಲಾಗುವುದು ಅಥವಾ ಅವರು ನಮೂದಿಸಿರುವ ಬಿಡ್ ಮೊತ್ತವು ಸಮಂಜಸವಾಗಿಲ್ಲದ ಪಕ್ಷದಲ್ಲಿ ಹೊಸ ಹರಾಜು ಪ್ರಕ್ರಿಯೆಯನ್ನು ನಡೆಸಲಾಗುವುದು.

(9) ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ವಾಹನವನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು.

(10) ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction .asp ರಲ್ಲಿ ಪ್ರಕಟಿಸಲಾಗಿದೆ.

ಸಹಿ-

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು

(ಜಾರಿ) ತುಮಕೂರು.

Assistant Commissioner of Comml.Taxes,
(Enforcement) Tumkur.